ಓ.ಎಸ್.212/2017
ಪಿ.ಡಬ್ಲ್ಯೂ-1

ದಿನಾಂಕಃ **14.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಆರ್.ಆರ್. ವಕೀಲರಿಂದಃ

ಪರ್ತಿಹಳ್ಳಿ ಗ್ರಾಮದಿಂದ ದಾವಾ ಸ್ವತ್ತು ಅರ್ಧ ಕಿ.ಮೀ ದೂರದಲ್ಲಿ ಇರುತ್ತದೆ. ದಾವಾ ಸ್ವತ್ತಿನಿಂದ ಕಡಗತ್ತೂರು ನಾಲ್ಕು ಕಿ.ಮೀ ದೂರದಲ್ಲಿ ಇರುತ್ತದೆ. ಚನ್ನವಾರ ಗ್ರಾಮದಿಂದ ಕಡಗತ್ತೂರು ಗ್ರಾಮ ಅರ್ಧ ಕಿ.ಮೀ ದೂರದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಚನ್ನವಾರ ಗ್ರಾಮ ಬೇಚಾವರ ಗ್ರಾಮ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ.ನಂಬರ್.41/3 ಆಗಿರುತ್ತದೆ. ಸರ್ವೆ.ನಂಬರ್.41/3 ರಲ್ಲಿ ಕರಾಬು ಇರುತ್ತದೆಯೇ ಅಥವಾ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

2. ಸರ್ವೆ.ನಂಬರ್.41/3 ಮೂಲತಃ ಕೆ.ಸಿ.ಸದಾಶಿವಯ್ಯ ಮತ್ತು ಮಕ್ಕಳಿಗೆ ಸೇರಿದಂತಹ ಜಮೀನಾಗಿರುತ್ತದೆ. ಸಾಕ್ಷಿ ಮುಂದುವರೆದು ಅವರಿಂದ ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸರ್ವೆ.ನಂಬರ್.41/3 ರಲ್ಲಿ ಗಿಡ್ಡಪ್ಪನವರ ಹನುಮಂತಪ್ಪನ ಮಗ ಸಂಜೀವಪ್ಪರವರಿಗೆ ಕ್ರಯ ಆಗಿರುತ್ತದೆಯೋ ಅಥವಾ ಗಿಡ್ಡಪ್ಪನವರ ಹನುಮಂತಪ್ಪನವರಿಗೆ ಕ್ರಯ ಆಗಿರುತ್ತದೆಯೋ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಗಿಡ್ಡಪ್ಪನವರ ಸಂಜೀವಪ್ಪನವರಿಗೆ ಕ್ರಯ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಗಿಡ್ಡಪ್ಪನವರ ಸಂಜೀವಪ್ಪನ ಹೆಂಡತಿಯ ಹೆಸರು ಚಿನ್ನಕ್ಕ. ಗಿಡ್ಡಪ್ಪನವರ ಸಂಜೀವಪ್ಪನವರಿಗೆ ನಾಲ್ಕು ಜನ ಮಕ್ಕಳು. ಅವರುಗಳೆಂದರೆ ಅಂಜಿನರೆಡ್ಡಿ ಹನುಮಂತರಾಯಪ್ಪ, ಸಂಜೀವರಾಯಪ್ಪ, ಪಿ.ಎಸ್.ಕೃಷ್ಣರೆಡ್ಡಿ, ಸಂಜೀವಪ್ಪನವರಿಗೆ ಹೆಣ್ಣು ಮಕ್ಕಳು ಇರುತ್ತಾರೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಅವರುಗಳೆಂದರೆ ಲಕ್ಷ್ಮಮ್ಮ, ಗಂಗಮ್ಮ ಮತ್ತು ಪಾರ್ವತಮ್ಮ. ನಮ್ಮ ಅಕ್ಕ ತಂಗಿಯರಲ್ಲಿ ಲಕ್ಷ್ಮಮ್ಮ

P.S. Krishna Reddy

14/7/2026

ಮಾತ್ರ ಜೀವಂತವಾಗಿ ಇರುತ್ತಾರೆ ಗಂಗಮ್ಮ ಮತ್ತು ಪಾರ್ವತಮ್ಮನ ಮಕ್ಕಳು ಜೀವಂತವಾಗಿ ಇರುತ್ತಾರೆ.

3. ಗಿಡ್ಡಪ್ಪನವರ ಸಂಜೀವಪ್ಪ ಪ್ರತಿವಾದಿಗಳ ತಾತ ಎಂದು ಸೂಚಿಸುವುದು ಸರಿಯಲ್ಲ. ದಿ:18.07.1968ರ ಕ್ರಯಪತ್ರದ ಆಧಾರದ ಮೇರೆಗೆ ನಮ್ಮ ಹೆಸರಿಗೆ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 5 ನೇ ಪ್ರತಿವಾದಿ ಕಡಗತ್ತೂರು ಗ್ರಾಮದ ನಿವಾಸಿ. 5 ನೇ ಪ್ರತಿವಾದಿ ಈಗ ಜೀವಂತವಾಗಿ ಇರುವುದಿಲ್ಲ ಎಂದರೆ ಸರಿ.

4. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಸಂಜೀವಪ್ಪ ತೀರಿಕೊಂಡ ನಂತರ ಅವರ ತಮ್ಮ ದೊಡ್ಡತಿಮ್ಮಪ್ಪರವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನ್ನ ತಂದೆ ಬರೆದುಕೊಟ್ಟಿರುವುದಿಲ್ಲ, ದೊಡ್ಡತಿಮ್ಮಪ್ಪ ಸ್ವಲ್ಪ ಕಂದಾಯ ಕಟ್ಟಿ ಆ ಕೆಲಸ ಮಾಡಿಸಿಕೊಂಡಿರುತ್ತಾನೆ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಯಾರು ಸ್ವಾಧೀನದಲ್ಲಿ ಇರುತ್ತಾರೆ ಅವರಿಂದ ಕಂದಾಯ ಕಟ್ಟಿಸಿಕೊಳ್ಳುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನಾವೇ ಸ್ವಾಧೀನದಲ್ಲಿ ಇರುತ್ತವೇ ನಾವೇ ಕಂದಾಯ ಕಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. 5 ನೇ ಪ್ರತಿವಾದಿ ಜೀವಂತವಾಗಿ ಇದ್ದಾಗ ದಾವಾ ಸ್ವತ್ತನ್ನು 5 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಶ್ರಾವಂಡನಹಳ್ಳಿಯ ಎಸ್.ಬಿ.ಎಂ. ಬ್ಯಾಂಕಿಗೆ ಅಡಮಾನ ಮಾಡಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ದಾವಾ ಸ್ವತ್ತಿನ ಭೋಗ್ಯವನ್ನು ಬಿಡುಗಡೆ ಮಾಡಿಕೊಂಡು ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

P. S. Krishna

14/7/2026

5. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ಕಛೇರಿ ಮತ್ತು ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರಕರಣಗಳು ನಡೆದಿರುತ್ತವೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ಈ ದಾವೆಯ ತೀರ್ಪಿನಂತೆ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಆದೇಶವಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ಗಿಡ್ಡಪ್ಪನವರ ಸಂಜೀವಪ್ಪ ಖರೀದಿ ಮಾಡಿದ್ದರು ನನ್ನ ತಾತನ ಹೆಸರು ಸಂಜೀವಪ್ಪ ಎಂದು ಇರುವುದನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತುನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

6. ನಮ್ಮ ಮನೆತನದ ಹೆಸರು ಗಿಡ್ಡಪ್ಪನವರು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಮ್ಮ ಮನೆತರನ ಹೆಸರಿಗೆ ಸಂಬಂಧಿಸಿದಂತೆ ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಯಾವ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

P. Shrishaila Patil

ಓ. ಹೇ. ಕೇ. ಸರಿ. ಇದೆ.

14/7/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ